ಆ) 2006–07ನೇ ಸಾಲಿನಲ್ಲಿ 41985.44 ಲಕ್ಷ ರೂ.ಗಳು ಒದಗಿಸಲಾಗಿದೆ.

ಇ) ಖರ್ಚಾಗಿರುವ ಮೊತ್ತ (ಡಿಸೆಂಬರ್ 2006ರ ಅಂತ್ಯಕ್ಕೆ) 5827.92 ಲಕ್ಷ ರೂ.ಗಳು ಉಳಿದಿರುವ ಮೊತ್ತ 36157.52 ಲಕ್ಷ ರೂ.ಗಳು. ಇದರಲ್ಲಿ 22639.00 ಲಕ್ಷ ರೂ.ಗಳನ್ನು ಅಧ್ಯರ್ಪಣೆ ಮಾಡಲು ಪ್ರಸ್ತಾಪಿಸಿದೆ.

730 (988) ಶ್ರೀ ಅಂಜನಾಮೂರ್ತಿ (ನೆಲಮಂಗಲ): ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ರೇಷ್ಮೆ ಕೃಷಿ ಆಧಾರಿತ ರೈತರಿಗಾಗಲಿ, ಅವಲಂಬಿತ ಕಾರ್ಮಿಕರಿಗಾಗಲೀ ಹಾಗೂ ಉತ್ತಮ ಗುಣಮಟ್ಟದ ರೇಷ್ಮೆ ಉತ್ಪಾದಕರಿಗೆ ಸರ್ಕಾರ ಬಿಡುಗಡೆ ಮಾಡಿದ ಹಣ ಎಷ್ಟು ;

ಆ) ಯಾವ ಯಾವ ಭಾಗದಲ್ಲಿ ಹಣ ಬಳಕೆಯಾಗಿದೆ ಮತ್ತು ಆಯವ್ಯಯದಲ್ಲಿ ತಿಳಿಸಿರುವಂತೆ "ರೇಷ್ಮೆ ವರದಾನ ಯೋಜನೆ"ಯನ್ನು ಸರ್ಕಾರ ಸ್ಥಾಪಿಸಲಾಗಿದೆಯೇ;

ಇ) ಇದಕ್ಕಾಗಿ ಎಷ್ಟು ಹಣ ಬಿಡುಗಡೆಯಾಗಿದೆ ?

ಶ್ರೀ ಎಸ್. ಶಿವಣ್ಣ (ರೇಷ್ಮೆ ಸಚಿವರು):

ಅ) ರಾಜ್ಯದಲ್ಲಿ ರೇಷ್ಮೆ ಕೃಷಿ ಅಭಿವೃದ್ಧಿಪಡಿಸಲು ರೇಷ್ಮೆ ಬೆಳೆಗಾರರಿಗೆ ಮತ್ತು ರೀಲರುಗಳಿಗೆ ಸಹಾಯವಾಗುವ ಈ ಕೆಳಕಂಡ ಕಾರ್ಯಕ್ರಮಗಳಿಗೆ 2006–07ನೇ ಸಾಲಿಗೆ ಒಟ್ಟು ರೂ. 3695.51 ಲಕ್ಷಗಳ ವಂಟನೆ ಒದಗಿಸಲಾಗಿದೆ. ಜನವರಿ 2007ರ ಅಂತ್ಯದವರೆಗೆ ರೂ. 2684.31 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಕಾರ್ಯಕ್ರಮಗಳು	ವಂಟನೆ	ಬಿಡುಗಡೆ ಮಾಡಲಾದ ಹಣ
1.	ಕೆಟಲಿಟಿಕ್ ಅಭಿವೃದ್ಧಿ ಯೋಜನೆ – ರಾಜ್ಯ ವಲಯ	2075.00	1775.00
2.	ರೇಷ್ಮೆ ವರದಾನ ಯೋಜನೆ – ರಾಜ್ಯ ವಲಯ	500.00	100.00
3.	ಹುಳು ಸಾಕಾಣಿಕೆ ಅಭಿವೃದ್ಧಿ – ರಾಜ್ಯ ವಲಯ	352.20	287.62
4.	ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು	655.73	476.47
5.	ವಿಶೇಷ ಘಟಕ ಯೋಜನೆ – ಜಿಲ್ಲಾ ವಲಯ	86.98	40.00
6.	ಗಿರಿಜನ ಉಪಯೋಜನೆ – ಜಿಲ್ಲಾ ವಲಯ	25.60	5.22
	ಒಟ್ಟು	**3695.51**	**2684.31**

ಆ) ಜಿಲ್ಲಾವಾರು ಬಳಕೆಯಾದ ಹಣದ ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

2006–07ನೇ ಸಾಲಿನಲ್ಲಿ 'ರೇಷ್ಮೆ ವರದಾನ ಯೋಜನೆ' ಕಾರ್ಯಕ್ರಮಕ್ಕೆ ರೂ. 500 ಲಕ್ಷಗಳನ್ನು ಮೀಸಲಿರಿಸಲಾಗಿದ್ದು, ಆಡಳಿತಾತ್ಮಕ ಮಂಜೂರಾತಿ ದೊರೆತಿದ್ದು, ಅನುಷ್ಠಾನಕ್ಕೆ ತರಲಾಗಿದೆ.

ಇ) ರೇಷ್ಮೆ ವರದಾನ ಯೋಜನೆಗೆ ಇದುವರೆಗೆ ರೂ. 100 ಲಕ್ಷಗಳು ಬಿಡುಗಡೆಯಾಗಿದ್ದು, ಉಳಿದ ಹಣವನ್ನು ಸಹ ಬಿಡುಗಡೆ ಮಾಡಲು ಪರಿಶೀಲನೆಯಲ್ಲಿದೆ.

ವಿಧಾನಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 988ರ ಅನುಬಂಧ

ರೇಷ್ಮೆ ಕೃಷಿ ಅಭಿವೃದ್ಧಿಗಾಗಿ 2006–07ನೇ ಸಾಲಿನ ಜನವರಿ 2007ರ ಅಂತ್ಯಕ್ಕೆ ಬಳಕೆಯಾದ ಮೊತ್ತದ ವಿವರ (ರೂ. ಲಕ್ಷಗಳಲ್ಲಿ)

ಕ್ರ.ಸಂ.	ಜಿಲ್ಲೆಗಳು	ಬಳಕೆಯಾದ ಮೊತ್ತ
1.	ಬೆಂಗಳೂರು (ಗ್ರಾಮಾಂತರ)	396.088
2.	ಬೆಂಗಳೂರು (ನಗರ)	215.966
3.	ಬಾಗಲಕೋಟೆ	43.858
4.	ಬೆಳಗಾಂ	83.73
5.	ಬಳ್ಳಾರಿ	35.01
6.	ಬೀದರ್	48.019
7.	ಬಿಜಾಪುರ	25.19
8.	ಚಾಮರಾಜನಗರ	40.267
9.	ಚಿಕ್ಕಮಗಳೂರು	28.240
10.	ಚಿತ್ರದುರ್ಗ	48.750
11.	ದಕ್ಷಿಣ ಕನ್ನಡ	9.695
12.	ದಾವಣಗೆರೆ	18.731
13.	ಧಾರವಾಡ	22.199
14.	ಗದಗ್	15.250
15.	ಗುಲ್ಬರ್ಗಾ	38.827
16.	ಹಾಸನ	87.095
17.	ಹಾವೇರಿ	32.518
18.	ಕೊಡಗು	65.545
19.	ಕೋಲಾರ	743.182
20.	ಕೊಪ್ಪಳ	26.57

21.	ಮಂಡ್ಯ	153.816
22.	ಮೈಸೂರು	73.030
23.	ರಾಯಚೂರು	42.068
24.	ಶಿವಮೊಗ್ಗ	21.330
25.	ತುಮಕೂರು	117.170
26.	ಉಡುಪಿ	10.970
27.	ಉತ್ತರ ಕನ್ನಡ	160.801
28.	ಮೈಸೂರು ಬಿತ್ತನೆ ವಲಯ	80,400
	ಒಟ್ಟು	**2684.31**

731 (546) ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2006ರಲ್ಲಿ ರಾಜ್ಯದ ಬೆಳಗಾವಿ, ಬಿಜಾಪುರ, ಬಾಗಲಕೋಟೆ, ರಾಯಚೂರು ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ಪ್ರವಾಹದಿಂದ ಉಂಟಾದ ನಷ್ಟದ ಪ್ರಮಾಣವೆಷ್ಟು ;

ಆ) ಈ ಪ್ರವಾಹದಿಂದ ನೊಂದವರಿಗೆ ಸರ್ಕಾರ ನೀಡಿದ ಪರಿಹಾರವೆಷ್ಟು ;

ಇ) ಪ್ರವಾಹದಿಂದ ಯಾವ ಯಾವ ಬೆಳೆ ನಾಶ, ಆಸ್ತಿ-ಪಾಸ್ತಿ ಹಾಗೂ ರಸ್ತೆ ಹಾಳಾಗಿದೆ ;

ಈ) ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ನೀಡಿದ ಪರಿಹಾರ ಮೊತ್ತವೆಷ್ಟು ; (ಜಿಲ್ಲಾವಾರು ವಿವರ ನೀಡುವುದು) ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು):

ಅ) 2006ರಲ್ಲಿ ಪ್ರವಾಹದಿಂದ ಕೆಳಕಂಡಂತೆ ನಷ್ಟವಾಗಿರುತ್ತದೆ.

ಬೆಳಗಾವಿ ರೂ. 22675.06 ಲಕ್ಷ
ಬಿಜಾಪುರ ರೂ. 2732.50 ಲಕ್ಷ
ಬಾಗಲಕೋಟೆ ರೂ. 9902.34 ಲಕ್ಷ
ರಾಯಚೂರು ರೂ 1166.36 ಲಕ್ಷ
ಗುಲ್ಬರ್ಗಾ ರೂ 626.67 ಲಕ್ಷ

ಆ) ಸರ್ಕಾರವು ಪ್ರಕೃತಿ ವಿಕೋಪ ಪರಿಹಾರ ನಿಧಿ ಅಡಿಯಲ್ಲಿ ಪ್ರವಾಹ ಪರಿಹಾರಕ್ಕೆ ಕೆಳಗಿನಂತೆ ಅನುದಾನ ಬಿಡುಗಡೆ ಮಾಡಿದೆ

ಬೆಳಗಾವಿ ರೂ. 8363.17 ಲಕ್ಷ
ಬಿಜಾಪುರ ರೂ. 519.06 ಲಕ್ಷ
ಬಾಗಲಕೋಟೆ ರೂ. 1979.06 ಲಕ್ಷ
ರಾಯಚೂರು ರೂ. 604.86 ಲಕ್ಷ
ಗುಲ್ಬರ್ಗಾ ರೂ. 1595.83 ಲಕ್ಷ